www.prepp.in

Prepp
Your Personal Exams Guide





# ಕನ್ನಡ / KANNADA

## (ಕಡ್ಡಾಯ ಪತ್ರಿಕೆ) / (Compulsory)

ವೇಳೆ : ಮೂರು ಗಂಟೆ
Time Allowed : Three Hours

ಗರಿಷ್ಠ ಅಂಕಗಳು : 300
Maximum Marks : 300

### ಪ್ರಶ್ನೆ ಪತ್ರಿಕೆ ನಿರ್ದಿಷ್ಟ ಸೂಚನೆಗಳು

*ಪ್ರಶ್ನೆಗಳನ್ನು ಉತ್ತರಿಸುವ ಮುನ್ನ ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಎಚ್ಚರಿಕೆಯಿಂದ ಓದಿರಿ :*

ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಬೇಕು.

ಪ್ರಶ್ನೆ/ಪ್ರಶ್ನೆಯ ಭಾಗಗಳಿಗೆ ಅನ್ವಯವಾಗುವ ಅಂಕಗಳನ್ನು ಅವುಗಳ ಎದುರಿಗೆ ಕೊಡಲಾಗಿದೆ.

ಉತ್ತರಗಳನ್ನು ಪ್ರಶ್ನೆಯಲ್ಲಿ ಸೂಚಿಸದ ಹೊರತು, **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಎಲ್ಲೆಲ್ಲಿ ಪ್ರಶ್ನೆಗಳಲ್ಲಿ ಪದಗಳ ಮಿತಿಯನ್ನು ಸೂಚಿಸಲಾಗಿದೆಯೋ ಆ ಸೂಚನೆಯನ್ನು ಪಾಲಿಸಬೇಕು. ಪದಗಳ ಮಿತಿ ಸೂಚಿಸಿದ್ದಕ್ಕಿಂತ ಹೆಚ್ಚು ಅಥವಾ ಕಡಿಮೆಯಾದಲ್ಲಿ ಅಂಕಗಳನ್ನು ಕಡಿತಗೊಳಿಸಲಾಗುವುದು.

ಯಾವುದಾದರೂ ಪುಟ ಅಥವಾ ಪುಟದ ಭಾಗವನ್ನು ಪ್ರಶ್ನೆ ಸಹಿತವಾದ ಉತ್ತರ ಪತ್ರಿಕೆಯಲ್ಲಿ ಖಾಲಿ ಬಿಟ್ಟಲ್ಲಿ, ಆ ಭಾಗವನ್ನು ಸ್ಪಷ್ಟವಾಗಿ ಪೆನ್ನಿನಿಂದ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*All questions are to be attempted.*

*The number of marks carried by a question / part is indicated against it.*

*Answers must be written in **KANNADA (Kannada script)** unless otherwise directed in the question.*

*Word limit in questions, wherever specified, should be adhered to and if answered in much longer or shorter than the prescribed length, marks may be deducted.*

*Any page or portion of the page left blank in the Question-cum-Answer Booklet must be clearly struck off.*

Q1. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯದ ಬಗ್ಗೆ 600 ಪದಗಳಲ್ಲಿ ಪ್ರಬಂಧ ಬರೆಯಿರಿ. *100*

(a) ಪ್ರಜಾಪ್ರಭುತ್ವದಲ್ಲಿ ನ್ಯಾಯಾಂಗದ ಪಾತ್ರ

(b) ಪರಿಸರ ಮತ್ತು ಸ್ವಾವಲಂಬನೆ

(c) ಜಾಗತೀಕರಣದ ಹಿನ್ನೆಲೆಯಲ್ಲಿ ಭಾಷೆಯ ಪಾತ್ರ

(d) ಭಾರತದ ಆರ್ಥಿಕ ವ್ಯವಸ್ಥೆ ಮತ್ತು ಅದರ ಸವಾಲುಗಳು

Q2. ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಕೊನೆಯಲ್ಲಿ ನೀಡಿರುವ ಪ್ರಶ್ನೆಗಳಿಗೆ ನಿಮ್ಮ ಭಾಷೆಯಲ್ಲಿ ಉತ್ತರಿಸಿ. ನಿಮ್ಮ ಉತ್ತರಗಳು ನೇರ, ಸ್ಪಷ್ಟ ಮತ್ತು ಸಂಕ್ಷಿಪ್ತವಾಗಿರಲಿ : *12×5=60*

ಇಡೀ ವಿಶ್ವ ಗಾಂಧೀಜಿಯವರೆಡೆಗೆ ಆಕರ್ಷಿತಗೊಂಡಿತ್ತು, ಏಕೆಂದರೆ ಅವರು ಪಾಶವೀ ಶಕ್ತಿಯ ಬದಲು ಆತ್ಮ ಶಕ್ತಿಯನ್ನು ಕುರಿತು ಪ್ರಚಾರಮಾಡಿದರು ಹಾಗೂ ಮೆಷೀನ್‌ಗನ್ ಮತ್ತು ಯುದ್ಧ ಟ್ಯಾಂಕರ್‌ಗಳನ್ನು ಎದುರಿಸಲು ಅಹಿಂಸೆಯ ಸಹಾಯ ಪಡೆದರು. ಆದರೆ ಅವರು ಅಹಿಂಸೆಯ ಸಹಾಯವನ್ನು ಏಕೆ ಪಡೆದರೆಂಬುದು ಮುಖ್ಯವಾದದ್ದು ? ಅದೇಕೆಂದರೆ ಹಿಂಸೆಯ ಸಹಾಯದಿಂದ ಭಾರತವನ್ನು ಬ್ರಿಟಿಷರಿಂದ ಬಿಡುಗಡೆಗೊಳಿಸಲು ಸಾಧ್ಯವಾಗುತ್ತಿರಲಿಲ್ಲ ಅಥವಾ ಮಾನವನು ಪಶುಸ್ವಭಾವವನ್ನು ಉಪಯೋಗಿಸುವವರೆಗೆ ಅವನು ತನ್ನನ್ನು ತಾನು ಮನುಷ್ಯನೆಂದು ಕರೆದುಕೊಳ್ಳುವ ಹಕ್ಕಿಲ್ಲ ಎಂದು ಭಾವಿಸಿದ್ದಿರಬಹುದು. ಇದರಿಂದ ಮೊದಲನೆಯದಾಗಿ ಅಹಿಂಸೆಯು ಶಕ್ತಿಹೀನ ಮತ್ತು ಕೈಲಾಗದ ವ್ಯಕ್ತಿತ್ವವೆಂದು ಸಾಬೀತು ಪಡಿಸಿದಂತಾಯಿತು. ಅಂದರೆ ನಮ್ಮಲ್ಲಿ ಟ್ಯಾಂಕರ್‌ಗಳಿಲ್ಲದಿದ್ದರೆ ಅಹಿಂಸೆಯನ್ನು ಒಪ್ಪಿಕೊಳ್ಳುವುದೆಂದಾಯಿತು. ಆದರೆ ಎರಡನೆಯದಾಗಿ ಅಹಿಂಸೆಯು ಮಾನವತೆಯ ವಿಕಾಸಕ್ಕೆ ಸಹಕಾರಿಯೆಂಬುದನ್ನು ಸಾಬೀತು ಪಡಿಸುತ್ತಾ, ಅವನು ಪರಿಶುದ್ಧನಾಗುವುದಕ್ಕೆ ಸಹಕಾರಿಯಾಯಿತು.

ಭಾರತೀಯರು ಗಾಂಧೀಜಿಯವರ ನಾಯಕತ್ವದಲ್ಲಿ ಬ್ರಿಟಿಷರ ವಿರುದ್ಧ ಹೋರಾಡುತ್ತಿದ್ದಾಗ ಅಲ್ಲಿನ ಬಹುಪಾಲು ಜನ ಬ್ರಿಟಿಷರ ವಿರುದ್ಧ ಹೋರಾಡಲು ತಮಗೆ

ಬೇಕಾದ ಅನುಕೂಲ ಮತ್ತು ಹಿಂಸಾತ್ಮಕ ಶಸ್ತ್ರಾಸ್ತ್ರಗಳು ನಮ್ಮಲ್ಲಿಲ್ಲ ಎಂಬ ಅಭಿಪ್ರಾಯವನ್ನು ಹೊಂದಿದ್ದರು. ಅವರಿಗೆ ಭಾರತವನ್ನು ಅಹಿಂಸೆಯ ವತಿಯಿಂದ ಸ್ವಾತಂತ್ರ್ಯ ಪಡೆಯುವುದೇ ಗುರಿಯಾಗಿತ್ತು. ಭಾರತದ ಸ್ವಾತಂತ್ರ್ಯವನ್ನು ಪಡೆಯುವುದೇ ಅವರ ದೊಡ್ಡಗುರಿಯಾಗಿತ್ತು. ಅವರು ಕ್ರೂರವಾದ ಶಸ್ತ್ರಾಸ್ತ್ರಗಳಿಂದ ಸಾಧಿಸಬಹುದಾದ ಗುರಿಯನ್ನು ಮಾನವ ಮೌಲ್ಯಗಳಿಂದ ಸಾಧಿಸಬಹುದೆಂಬುದನ್ನು ಜನ ನಂಬಬೇಕೆಂದು ಗಾಂಧೀಜಿ ಬಯಸಿದ್ದರು.

ಗಾಂಧೀಜಿಯವರ ಮುಖ್ಯ ಉದ್ದೇಶವೇನೆಂದರೆ ದೇಶದ ಪ್ರಜೆಗಳ ಗಾಯಗಳನ್ನು ಗುಣಪಡಿಸುವುದರಲ್ಲಿದ್ದ ಅವರಲ್ಲಿನ ಹಾನಿಕರ ಭಾವನೆಯನ್ನು ವಿರೋಧಿಸುವುದಾಗಿತ್ತು. ದ್ವೇಷ, ಕೋಪ ಮತ್ತು ಒರಟುತನಗಳು ಪ್ರಾಣಿಗಳಲ್ಲೂ ಇದ್ದು ಅವು ಈ ಕ್ರೂರ ವಿಧಾನಗಳಿಂದಲೇ ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳುತ್ತವೆ ಆದರೆ ಮಾನವ ಪಶುಗಳಿಗಿಂತ ಬೇರೆ. ಆದುದರಿಂದ ಅವನು, ಅವನ ದಿನ ನಿತ್ಯದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಪ್ರಾಣಿಗಳಿಗೆ ಸಿಗದ ಎಲ್ಲಾ ಸಂಪನ್ಮೂಲಗಳ ಮೂಲಕ ತನ್ನ ಆಗ್ರಹಗಳನ್ನು ನಿಯಂತ್ರಿಸುವುದು ಸರಿ. ಈ ತೀರ್ಮಾನವನ್ನೇಕೆ ಗಾಂಧೀಜಿ ತೆಗೆದುಕೊಂಡರು ಎಂಬ ಪ್ರಶ್ನೆ ಉದ್ಭವಿಸುತ್ತದೇ ಮತ್ತು ಅಹಿಂಸೆಯ ಪ್ರಯೋಗವನ್ನು ಇತರ ದೇಶಗಳಲ್ಲಲ್ಲದೆ ಭಾರತದಲ್ಲೇ ಏಕೆ ಆರಂಭಿಸಲ್ಪಟ್ಟಿತ್ತು ? ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ. ಹಲವು ಜನ ಇದೊಂದು ಆಕಸ್ಮಿಕ ಎಂದು ತಿರುಗಿ ಹೇಳುತ್ತಾರೆ. ಅಹಿಂಸೆಯ ತತ್ವ ಮತ್ತು ಅಸಹಕಾರ ತತ್ವವನ್ನು ಅಮೇರಿಕದ ಹೆಸರಾಂತ ಚಿಂತಕರಾದ ಥೋರೋ ಮತ್ತು ರಷ್ಯಾದ ಸಂತ ಹಾಗೂ ಸಾಹಿತಿ ಟಾಲ್‌ಸ್ಟಾಯ್ ಅವರೂ ಸಹ ಅದರ ಸಾರವನ್ನು ಪಡೆದಿದ್ದರು ಎಂದು ಹೇಳಲಾಗಿದೆ. ಗಾಂಧೀಜಿ ಥೋರೋ ಮತ್ತು ಟಾಲ್‌ಸ್ಟಾಯ್ ಅವರ ವಿಚಾರಗಳನ್ನು ತಿಳಿದಿದ್ದರು. ಭಾರತಲ್ಲಿಯೂ ಸ್ವಾತಂತ್ರ್ಯ ಪೂರ್ವದಲ್ಲೇ ಅಸಹಕಾರ ಮತ್ತು ಅವಿಧೇಯತೆಯ ಸೂಚನೆಯನ್ನು ಗಾಂಧಿಗೂ ಮೊದಲು ಅರವಿಂದರು ಸೂಚಿಸಿದ್ದರು. ಆದರೂ ಅದನ್ನು ಭಾರತದಲ್ಲಿಯೇ ಏಕೆ ಮೊದಲ ಬಾರಿಗೆ ಪ್ರಯೋಗಿಸಲಾಯಿತು ಎಂಬ ಪ್ರಮುಖ ಪ್ರಶ್ನೆ ಹಾಗೆಯೇ ಉಳಿಯುತ್ತದ.

ದೈಹಿಕ ಶಕ್ತಿಗಿಂತ ಆತ್ಮಶಕ್ತಿ ಉತ್ತಮವಾದದ್ದು ಎಂಬ ಸತ್ಯವನ್ನು ಪ್ರಪಂಚದ ಇತರ ದೇಶಗಳಿಗಿಂತಲೂ ಭಾರತೀಯರು ಅರ್ಥೈಸಿಕೊಂಡಿದ್ದರು. ಥೋರೋ, ಟಾಲ್‌ಸ್ಟಾಯ್, ಎಮರ್ಸನ್ ಅಥವಾ ರೋಮೈನ್ ರೋಲ್ಯಾಂಡ್ ಯಾವಾಗಲಾದರೂ ಇಂತಹ ಭಾವನೆಗಳನ್ನು ಹೊಂದಿದಾಗ ಅವರು ನಾಗರಿಕ ಅವಿಧೇಯತೆಯೆಂಬ ಭಾರತೀಯ ತತ್ವವನ್ನು ನೋಡುತ್ತಿದ್ದರು

www.prepp.in

Prepp
Your Personal Exams Guide

ಇದು ಭಾರತದಲ್ಲಿ ಮಾತ್ರ, ಇತ್ತು ಯಾವ ವ್ಯಕ್ತಿ ಈ ಚಿಂತನೆಯನ್ನು ಯೋಚಿಸಿದರೋ ಅವರು ಭಾರತೀಯ ಚಿಂತನೆಗಳನ್ನು ಹೊಂದಿದವರಾಗಲೀ ಅಥವಾ ಸ್ವಭಾವತಃ ಭಾರತದಾದ ಚಿಂತನೆಗಳಿಗೆ ಆಕಸ್ಮಾತ್ತಾಗಿ ಬಂದವರೂ ಅಲ್ಲ, ರೀ ಎರಡೂ ಉದ್ಯೋಗಳು ಥೋರೋ ಮತ್ತು ಟಾಲ್‌ಸ್ಟಾಯಾಗಿ ಸಾಧ್ಯವಿತ್ತು ಅಂತಿಮವಾಗಿ ಅರವಿಂದ ಅವರನ್ನು ನೋಡುತ್ತೇವೆ ಆದರೆ ಅವರೂ ಭಾರತೀಯರೇ.

(a) ಗಾಂಧೀಜಿಯೆಡೆಗೆ ಪ್ರಪಂಚವು ಏಕೆ ಆಕರ್ಷಣೆಗೊಂಡಿತು ? 12

(b) ಗಾಂಧಿಯವರು ಸ್ವಾತಂತ್ರ್ಯ ಪಡೆಯಲು ಅಹಿಂಸಾ ಮುಖ್ಯ ತತ್ವವನ್ನೇ ಪರಿಗಣಿಸಿದ್ದು ಏಕೆ ? 12

(c) ಬರಹಗಾರರ ಪ್ರಕಾರ ಪ್ರಾಣಿ ಮತ್ತು ಮನುಷ್ಯನಿಗಿರುವ ವ್ಯತ್ಯಾಸವೇನು ? 12

(d) ಅಹಿಂಸೆಯು ಭಾರತದಲ್ಲೇ ಏಕೆ ಪ್ರಾರಂಭವಾಯಿತು ? 12

(e) ನಾಗರಿಕ ಅವಿಧೇಯತೆಯನ್ನು ಯಾರು ತಲುಪಬಲ್ಲರು ? 12

**Q3. ಈ ಕೆಳಗಿನ ಭಾಗವನ್ನು ಅದರ ಮೂರನೇ ಒಂದು ಭಾಗಕ್ಕೆ ಮೀರದಂತೆ ಸಂಗ್ರಹಿಸಿ ಬರೆಯಿರಿ. ಇದರ ಶೀರ್ಷಿಕೆ ಸೂಚಿಸುವ ಅವಶ್ಯಕತೆಯಿಲ್ಲ. ಸಂಗ್ರಹವು ನಿಮ್ಮದೇ ಭಾಷೆಯಲ್ಲಿರಲಿ.** **60**

ಕಾಲ ಮತ್ತು ಚರಿತ್ರೆಯ ನಿಯಮ ಮತ್ತು ಕಾನೂನುಗಳಿಗೆ ಸಂಬಂಧಿಸಿದಂತಹ ಜ್ಞಾನವು ಬೇರಾವುದೇ ಕಾಲಕ್ಕಿಂತ ಇಂದಿನ ಆಧುನಿಕ ಮನುಷ್ಯನಿಗೆ ಚೆನ್ನಾಗಿ ತಿಳಿದಿದೆ. ನಿಜವಾದ ಅರ್ಥದಲ್ಲಿ ಅವನು ಚಾರಿತ್ರಿಕ ಮಾನವ ಒಂದರ್ಥದಲ್ಲಿ ನಮ್ಮ ಚರಿತ್ರೆಯ ಜ್ಞಾನವು ಆಧುನಿಕತೆಯ ಪ್ರತೀಕ ಮಧ್ಯಕಾಲೀನ ಯುಗದಲ್ಲಿ ಧರ್ಮದ ಕೇಂದ್ರ ಬಿಂದುವಾಗಿ ಸಂಸ್ಕೃತಿಯು ಅನುಭವಿಸಿದ ಸ್ಥಾನವನ್ನು ನಿಧಾನವಾಗಿ ಅದು ಚರಿತ್ರೆಗೆ ಬಿಟ್ಟುಕೊಟ್ಟಿದೆ. ಮನುಷ್ಯ ತನ್ನ ಸುತ್ತಮುತ್ತಲಿನ ಪ್ರಕೃತಿಯೊಂದಿಗೆ ಬದುಕುವ ಬದಲಾಗಿ ಚರಿತ್ರೆಯೊಂದಿಗೆ ಬದುಕಲಾರಂಭಿಸಿದ್ದಾನೆ. ಈ ಅರ್ಥದಲ್ಲಿ ಪ್ರತಿ ಘಟನೆಯೂ ಹಿಂದಿನ ಘಟನೆಗಿಂತ ಹೊಸದಾಗಿರುತ್ತದೆ. ಇಂದು ಏನು ನಡೆಯುತ್ತಿದೆಯೋ ಅದು ಹಿಂದೆಂದೂ ನಡೆದಿರಲಿಲ್ಲ, ಈ ರೀತಿ ನಿಧಾನವಾಗಿ ಬೆಳೆಯುತ್ತಿರುವ ಮನುಷ್ಯನ ಜ್ಞಾನದ ಬೆಳವಣಿಗೆಯು ಪುರಾತನ ಗ್ರೀಕರಿಗೆ ಗೊತ್ತಿರಲಿಲ್ಲ ಅದು ಭಾರತೀಯ ಚಿಂತಕರಿಗೂ ಹೊಸದಾಗಿತ್ತು. ಹಿಂದೆ ಮಾನವನ ಜೀವನ ಶೈಲಿಯನ್ನು ಸಂಪ್ರದಾಯಗಳು ನಿರ್ದೇಶಿಸುತ್ತಿದ್ದು ಮನುಷ್ಯನನ್ನು ಶಿಸ್ತು ಬದ್ಧನನ್ನಾಗಿಟ್ಟಿದ್ದವು. ಈಗ ಚರಿತ್ರೆಯು ಮನುಷ್ಯನ ಭವಿಷ್ಯವನ್ನು ನಿರ್ಧರಿಸಿ ಅವನು ತನ್ನ ಸಂಪ್ರದಾಯಗಳನ್ನು ತಿಳಿಯಲು ಹಿಂತಿರುಗಿ ನೋಡಬೇಕಾಗಿದೆ.

ಆದರೆ ನಾವಿಂದು ಅನುಭವಿಸುತ್ತಿರುವ ಚರಿತ್ರೆಯ ಒತ್ತಡವನ್ನು ಹಿಂದೆಂದೂ ಅನುಭವಿಸಿರಲಿಲ್ಲ ಮನುಷ್ಯ ಕಾಲ ಮತ್ತು ಚರಿತ್ರೆಯಿಂದ ಬೇಸತ್ತಿದ್ದಾನೆ. 19 ನೇ ಶತಮಾನದಲ್ಲಿ ಜಾಗತಿಕ ಶಕ್ತಿಯೊಂದಿಗೆ ಹೊಂದಿಕೊಂಡಿರುವ ಚರಿತ್ರೆಯ ಜ್ಞಾನವು ಮನುಷ್ಯನ ಬೆಳವಣಿಗೆ ಮತ್ತು ಬಿಡುಗಡೆಯ ಸಂದೇಶವನ್ನು ತಂದಿರುವುದು ದುರಂತ. ಭವಿಷ್ಯವನ್ನು ನಿರ್ಧರಿಸುವ ನಿಯಮ, ನಿರ್ಬಂಧ ಮತ್ತು ಕಾನೂನುಗಳು ಇನ್ನೂ ಇವೆ ಆದರೆ ಅವು ತುಳಿತಕ್ಕೊಳಗಾಗಿವೆ. ಅವು ಭವಿಷ್ಯದ ಮುಚ್ಚಲ್ಪಟ್ಟ ಬಾಗಿಲುಗಳ ನಡುವೆ ಹೊಂದಿಕೊಳ್ಳುತ್ತಿಲ್ಲ, ಜ್ಞಾನದ ತಾರ್ಕಿಕ ವೈಭವೀಕೃತ ಭಾವನೆಯು ಮನುಷ್ಯನನ್ನು ಅವನದೇ ಭವಿಷ್ಯದೆಡೆಗೆ ನಡೆಯಲು ಅಸುರಕ್ಷಿತ, ಭಯೋತ್ಪಾದಕ ಮತ್ತು ಖಚಿತತೆ ಇಲ್ಲದಂತೆ ಮಾಡಿ ಬಂಧಿಸಿವೆ.

ಇದಲ್ಲದೆ, ಮನುಷ್ಯರಾದ ನಮಗೇ ನಮ್ಮ ಭವಿಷ್ಯದ ಬಗ್ಗೆ ಏನೂ ಅರಿವಿಲ್ಲವೆಂದಲ್ಲ, ಇಡೀ ಭವಿಷ್ಯವನ್ನು ಮಾನವನೇ ನಿರ್ಮಿಸಿದ ಕಲ್ಪನೆಗಳ ಆಧಾರದ ಮೇಲೆ ಮತ್ತು ಭವಿಷ್ಯದ ಆಗುಹೋಗುಗಳ ಮೇಲೆ ನಿರ್ಮಿಸಲಾಗಿದೆ, ಇದಕ್ಕೆ ಚರಿತ್ರೆಯ ತಿಳುವಳಿಕೆ ಸ್ಫೂರ್ತಿನೀಡಿದೆ ಆದರೆ ಈ ಭವಿಷ್ಯವು ವರ್ತಮಾನದ ಭಯಗಳೊಂದಿಗೆ ಯಾವುದೇ ಸಂಬಂಧ ಹೊಂದಿಲ್ಲ, ಆದರೆ ಈ ಚಾರಿತ್ರಿಕ ಭವಿಷ್ಯವನ್ನು ಇಂದಿನ ಭಯಗಳಿಂದ ನಮ್ಮನ್ನು ರಕ್ಷಿಸಲು ರೂಪಿಸಲಾಗಿದೆ. ಇದು ಕನಸೂ ಅಲ್ಲ ವರ್ಗರಹಿತಸಮಾಜದ ಕಲ್ಪನೆಯೂ ಅಲ್ಲ ಅಥವಾ ರೋಬೋಟು ಆಧಾರಿತ ಯಾಂತ್ರಿಕತೆಯೂ ಅಲ್ಲ, ನಾವು ವಾಸ್ತವಕಾಲದಲ್ಲಿ ಬದುಕದೆ ಕಲ್ಪನೆಯ ಕಾಲದಲ್ಲಿ ಬದುಕುತ್ತಿದ್ದೇವೆ. ಈ ಕಾಲದಲ್ಲಿ ಮಾನವನ ಸಾವನ್ನು ನಿಯಂತ್ರಿಸಲಾಗಿದೆ. ಏಕೆಂದರೆ ನಾವೇ ನಮ್ಮ ಸಾವಿನ ಭಯದಿಂದ ಭವಿಷ್ಯದಲ್ಲಿ ಆಶ್ರಯಪಡೆದಿದ್ದೇವೆ.

ಇದನ್ನು ಆಧುನಿಕ ಕಾಲದ ವ್ಯಂಗ್ಯವೆಂದು ಪರಿಗಣಿಸಲಾಗಿದೆ. ಒಂದು ಕಡೆ ಮನುಷ್ಯ ಚರಿತ್ರೆಯ ಜ್ಞಾನಕ್ಕೆ ಹೆದರುತ್ತಾನೆ ಮತ್ತೊಂದೆಡೆ ಚರಿತ್ರೆಯ ಗತಿಸಲ್ಪಟ್ಟ ಒಣ ಭೂತಕಾಲ ಮತ್ತು ಕಲ್ಪನಾ ಭವಿಷ್ಯದೊಂದಿಗೆ ಬೆರತುಹೋಗಿದ್ದಾನೆ. ಒಬ್ಬ ಮನುಷ್ಯನಾಗಿ ನದಿಯಲ್ಲಿ ಮುಳುಗುತ್ತಿದ್ದರೂ ನೀರಿನೊಂದಿಗೆ ಹೊಂದಾಣಿಕೆಮಾಡಿಕೊಳ್ಳಲು ಸೋಲುತ್ತಿದ್ದಾನೆ. ಈ ರೀತಿ ಚರಿತ್ರೆಯಲ್ಲಿ ಗತಿಸಿಹೋದ ಮನುಷ್ಯ ಕಾಲದ ಪ್ರಾಮುಖ್ಯತೆಯನ್ನು ಅರಿಯಲಾರದವನಾಗಿದ್ದಾನೆ. ಚರಿತ್ರೆ ಅವನ ಮೇಲೆ ಪರಿಣಾಮ ಬೀರಲಾಗಲಿಲ್ಲ ಆದರೆ ಅವನ ಜನನ, ಮರಣಗಳಿಗೆ ಸಾಕ್ಷಿಯಾಗಿದೆ. ಈ ಭೂಮಿಯ ಮೇಲೆ ಚರಿತ್ರೆ ಮನುಷ್ಯನಿಗೆ ಸಾಕ್ಷಿಯಾಗದಿದ್ದರೆ ಅದು ಅರ್ಥರಹಿತವಾಗುತ್ತದೆ. ಈ ಕಾರಣದಿಂದಲೇ ಇಂದು ಚರಿತ್ರೆಯು

www.prepp.in

Prepp
Your Personal Exams Guide

ಮನುಷ್ಯನಿಗೆ ಮೂಢ ನಂಬಿಕೆಯುಂಟಾಗಿದೆ. ಅದಕ್ಕಾಗಿಯೇ ಅವನು ಭವಿಷ್ಯದಿಂದ ಪಲಾಯನ ಹೊಂದಲು ಬಯಸುತ್ತಾನೆಯೇ ಹೊರತು ತನ್ನ ಭವಿಷ್ಯಕ್ಕೆ ಅರ್ಥಹುಡುಕಲು ಅಲ್ಲ.

ಆದರೆ ವರ್ತಮಾನದಿಂದ ಪಲಾಯನ ಹೊಂದಲು ಸಾಧ್ಯವೇ ? ವರ್ತಮಾನವು ಮನುಷ್ಯ ಮನುಷ್ಯನಾಗುವ ಕೇಂದ್ರವಲ್ಲ, ಮತ್ತೊಂದೆಡೆ ಅವನು ಚರಿತ್ರೆಯಲ್ಲಿ ಜೀವಂತವಾಗಿರುತ್ತಾನೆ. ಅವನ ಗುರಿ ಅವನದೇ ಭೂತಕಾಲವಾದರೂ ಅದು ಅವನ ಸಂಪೂರ್ಣ ಭವಿಷ್ಯವನ್ನು ಮತ್ತೊಂದು ಗುರಿಯೊಡನೆ ಮಿಲನಗೊಳಿಸಿ ತಿಳಿಸುತ್ತದೆ.

(319 ಶಬ್ದ)

**Q4. ಕೆಳಗಿನ ಗದ್ಯಭಾಗವನ್ನು ಇಂಗ್ಲೀಷಿಗೆ ಅನುವಾದ ಮಾಡಿ :** *20*

ಆಧುನಿಕ ಯುಗವು ಮಾಹಿತಿ ಮತ್ತು ತಂತ್ರಜ್ಞಾನದ ಯುಗವಾಗಿದೆ. ಮಾಹಿತಿ ಮತ್ತು ತಂತ್ರಜ್ಞಾನವು ವಿಜ್ಞಾನ ಕ್ಷೇತ್ರದಲ್ಲಿನ ಒಂದು ಆಧುನಿಕ ಅನ್ವೇಷಣೆ. ಅದು ಮಾನವಕುಲವು ಅದ್ಭುತ ಸಾಧನಗಳನ್ನು ಮಾಡಲು ಬಹಳ ಸಹಕಾರಿಯಾಗಿದೆ. ಈ ವೈಜ್ಞಾನಿಕ ಸಾಧನಗಳಿಂದ ನಾವು ಪ್ರಪಂಚದ ಯಾವುದೇ ಮೂಲೆಯಲ್ಲಿ ಕುಳಿತು ಮಾಹಿತಿ ಪಡೆಯಬಹುದು. ಈ ರೀತಿ ಮಾಹಿತಿಯನ್ನು ಪಡೆಯುವಿಕೆ ದೇಶ ದೇಶಗಳ ನಡುವಿನ ಅಂತರವನ್ನು ಕಡಿಮೆ ಮಾಡಿದೆ. ಇಡೀ ಪ್ರಪಂಚವು ತನ್ನ ಅಂಗೈಯಲ್ಲಿರುವಂತೆ ಮಾಡಿದೆ. ಈ ವೈಜ್ಞಾನಿಕ ಬೆಳವಣಿಗೆಯ ಯುಗದಲ್ಲಿ ಜಾಗತೀಕರಣದ ಕಲ್ಪನೆ ಮತ್ತು ವಿಶ್ವಭ್ರಾತೃತ್ವವು ವಿಕಸನಗೊಳ್ಳುತ್ತಿದೆ.

ಇಂದು ನಾವು ಸರಿಯಾದ ಅಂಚೆ ವ್ಯವಸ್ಥೆಯು ಇಲ್ಲದಂತ ಕಾಲವನ್ನು ಸ್ಮರಿಸಿಕೊಳ್ಳಬೇಕಾಗಿದೆ. ಈ ಹಿಂದೆ ಮಾಹಿತಿಯನ್ನು ವ್ಯಕ್ತಿಗಳ ಮೂಲಕ ಕಳುಹಿಸಿಕೊಡಲಾಗುತ್ತಿತ್ತು. ಈ ವ್ಯವಸ್ಥೆ ಅತ್ಯಂತ ದೀರ್ಘಸಮಯವನ್ನು ಪಡೆಯುತ್ತಿತ್ತು ಆ ಕಾಲದಲ್ಲಿ, ಜೀವನ ಎಷ್ಟು ಕಷ್ಟಕರವಾಗಿತ್ತು ? ಅದನ್ನೊಂದು ಊಹಿಸಲೂ ಅಸಾಧ್ಯ. ಕಾಲ ಬದಲಾಯಿತು, ಪ್ರತಿದಿನ ಹೊಸ ಪ್ರಯೋಗಗಳು ಬರುತ್ತಿವೆ. ಅಂಚೆ ಮತ್ತು ತಂತಿ, ದೂರವಾಣಿ ಮತ್ತು ಟೆಲಿಗ್ರಾಂಗಳನ್ನು ಅಭಿವೃದ್ಧಿ ಪಡಿಸಲಾಯಿತು. ಈ ಮೊದಲು ಸಂದೇಶಗಳನ್ನು ಅಕ್ಷರಗಳಲ್ಲಿ ಕಳುಹಿಸಲ್ಪಡುತ್ತಿತ್ತು, ಬದುಕು ವೇಗವನ್ನು ಪಡೆದ ಹಾಗೆ ರೇಡಿಯೋ ಮತ್ತು ದೂರದರ್ಶನಗಳು ಸಹ ಮುನ್ನಡೆದವು. ಗಣಕಯಂತ್ರಗಳ ಬರುವಿಕೆಯಿಂದ ಮಾಹಿತ ಕ್ಷೇತ್ರದಲ್ಲಿ ಹೊಸ ಕ್ರಾಂತಿಯುಂಟಾಯಿತು. ಅಂತರ್ಜಾಲ

www.prepp.in

Prepp Your Personal Exams Guide

ವ್ಯವಸ್ಥೆಯನ್ನು ಕಂಡುಹಿಡಿದ ನಂತರ ಎಲ್ಲಾ ಗಣಕ ಯಂತ್ರಗಳನ್ನು ಒಂದುಗೂಡಿಸಿ ಅವುಗಳನ್ನು ಒಂದಕ್ಕೊಂದು ಸಂಪರ್ಕ ಕಲ್ಪಿಸಲಾಯಿತು. ಈ ವ್ಯವಸ್ಥೆಯಿಂದ ವೇಗದ ಸಂಪರ್ಕವು ಸುಲಭವಾಯಿತು ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಬದಲಾವಣೆಯನ್ನು ಕಾಣಲಾಯಿತು ಈ ಯಾವುದೇ ಮಾಹಿತಿಯನ್ನು ತಕ್ಷಣಪಡೆಯಲು ಅನುಕೂಲವಾಯಿತು. ಇಂದು ಯಾರೇ ಆದರೂ ಪ್ರಪಂಚದ ಯಾವ ಮೂಲೆಯಲ್ಲಾದರೂ ಅಥವಾ ಎಲ್ಲಾ ಕಡೆಯಲ್ಲಿಯೂ ಅವರ ಉತ್ಪಾದನೆಯನ್ನು ಅತ್ಯಂತ ಸುಲಭವಾಗಿ ಜಾಹೀರು ಮಾಡಬಹುದು. ಗಣಕಯಂತ್ರ ಮತ್ತು ಅಂತರ್ಜಾಲ ವ್ಯವಸ್ಥೆಯ ಸೌಲಭ್ಯವನ್ನು ಇಂದು ಎಲ್ಲಾ ಕಛೇರಿ ಮತ್ತು ಮನೆಗಳಲ್ಲಿಯೂ ಕಾಣಬಹುದಾಗಿದೆ. ಅವುಗಳ ಸಹಾಯದಿಂದ ವಿಮಾನ, ರೈಲು, ಬಸ್ ಅಥವಾ ಸಿನಿಮಾ ಟಿಕೆಟ್‌ಗಳನ್ನು ನಾವು ಕುಳಿತಲ್ಲಿಂದಲೇ ಸುಲಭವಾಗಿ ಕಾಯ್ದಿರಿಸಬಹುದು ಮತ್ತು ಅದು ಯಾವ ಹಂತದಲ್ಲಿದೆಯೆಂದು ನೋಡಬಹುದು. ರಸ್ತೆ ಮತ್ತು ಸಾರಿಗೆ ವ್ಯವಸ್ಥೆಯ ಸ್ಥಿತಿಗತಿಗಳನ್ನು ಕುರಿತ ಮಾಹಿತ ಪಡೆಯಬಹುದು. ಅಂತರ್ಜಾಲ ಮತ್ತು ಮೊಬೈಲಿನ ಸಹಾಯದಿಂದ ಮನೆಯಲ್ಲಿ ಕುಳಿತೇ ಎಲ್ಲವನ್ನೂ ಆದೇಶಿಸಬಹುದು. ವಾಸ್ತವವಾಗಿ ಇದೊಂದು ರೀತಿಯಲ್ಲಿ ಅತಿಕಡಿಮೆ ಬೆಲೆಯಲ್ಲಿ ಸಿಗಬಹುದಾದ ಸಂವಹನ ಮತ್ತು ಮಾಹಿತಿ.

**Q5. ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಅನುವಾದಿಸಿರಿ :** ***20***

Democracy stands much superior to any other form of government in promoting dignity and freedom of the individual. Every individual wants to receive respect from fellow beings. Often conflicts arise among individuals because some feel that they are not treated with due respect. The passion for respect and freedom are the basis of democracy. Democracies throughout the world have recognised this, at least in principle. This has been achieved in various degrees in various democracies. For societies which have been built for long on the basis of subordination and domination, it is not a simple matter to recognise that all individuals are equal.

Take the case of dignity of women. Most societies across the world were historically male dominated societies. Long struggles by women have created some sensitivity today that respect to and equal treatment of women are necessary ingredients of a democratic society. That does not mean that women are actually always treated with respect. But once the principle is recognised, it becomes easier for women to wage a struggle against what is now unacceptable legally and morally.

www.prepp.in
Prepp
Your Personal Exams Guide

**Q6.** **(a)** **ಕೆಳಗಿನ ಪದಗಳ ಸಂಸ್ಕೃತ ರೂಪ ಬರೆಯಿರಿ :** **2×5=10**

(i) ದುಬ್ಬಾಲ 2

(ii) ಉಪದೇಶಾತ್ಮಕ 2

(iii) ದ್ವೈತ 2

(iv) ಬೆವರು 2

(v) ಗಿಣಿ 2

**(b)** **ಕೆಳಗಿನ ಪದಗಳ ಸಂಧಿರೂಪ ತಿಳಿಸಿ :** **2×5=10**

(i) ಮಳೆಗಾಲ 2

(ii) ಮನೆಯಲ್ಲಿ 2

(iii) ನಡತೆಯುಳ್ಳ 2

(iv) ನನಗನ್ನ 2

(v) ತಂಗುದಾಣ 2

**(c)** **ಛಂದಸ್ಸಿನ ಬಗೆಗಿರುವ ಪ್ರಶ್ನೆಗಳನ್ನು ಉತ್ತರಿಸಿ :** **2×5=10**

(i) ಕಂದ ಪದ್ಯ ಎಂದರೇನು ? 2

(ii) ವಾರ್ಧಕ ಷಟ್ಪದಿಯ ಮಾತ್ರೆಗಳ ವಿವರ ಕೊಡಿ. 2

(iii) ಆದಿ ಪ್ರಾಸವನ್ನು ವಿವರಿಸಿ. 2

(iv) ಷಟ್ಪದಿ ಎಂದರೇನು ? 2

(v) ಖಂಡ ಕಾವ್ಯ ಎಂದರೇನು ? 2

**(d)** **ಕೆಳಗಿನ ಉಕ್ತಿಗಳನ್ನು ಬರೆದ ಕವಿಗಳನ್ನು ಗುರುತಿಸಿ :** **2×5=10**

(i) ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು. 2

(ii) ನೀನುಳ್ಳೊಡುಂಟು ಮೇಳಿಗೆ ನೀನಿಲ್ಲದಿವೆಲ್ಲಮೊಳವೆ. 2

(iii) ಉಂಡ ಮನೆಗೆ ಎರಡು ಬಗೆವಾತನೇ ಹೊಲೆಯ. 2

(iv) ಉಳ್ಳವರು ಶಿವಾಲಯ ಕಟ್ಟುವರು ಬಡವನಯ್ಯ ನಾನೇನ ಮಾಡಬಲ್ಲೆ. 2

(v) ಮುಗಿಲ ಮಾರಿಗೆ ರಾಗ ರತಿಯ ನಂಜು ಏರಿತ್ತಾ. 2